## ದಿನಾಂಕ 10–07–2025 : 1ನೇ ವಾರದ ಸಭೆ/ ಕ್ಲಬ್ ಅಸೆಂಬ್ಲಿ




ಕಾರ್ಕಳ ರೋಟರಿ ಸಂಸ್ಥೆಯ ಪ್ರಥಮ ಸಭೆಯು ಕ್ಲಬ್ ಅಸೆಂಬ್ಲಿ ನಡೆಯಿತು ಈ ಸಭೆಯಲ್ಲಿ ಮುಖ್ಯ ಅತಿಥಿಯಾಗಿ Rtn ಡಾ. ಭರತೇಶ ಆದಿರಾಜ್ ಭಾಗವಹಿಸಿ ಕ್ಲಬ್ ಅಸೆಂಬ್ಲಿಯ ಬಗ್ಗೆ ಇಂಫಾರ್ಮೇಷನ್ ಅನ್ನು ನೀಡಿದರು. Rtn ಹರ್ಷಿಣಿ ವಿಜಯರಾಜ್ ಅವರು ಬಜೆಟ್ ಅನ್ನು ಮಂಡನೆ ಮಾಡಿರುತ್ತಾರೆ. ಕಾರ್ಕಳ ಸಂಸ್ಥೆಯ ಎಲ್ಲಾ ನಿರ್ದೇಶಕರುಗಳು ಒಂದು ವರ್ಷದ ಕಾರ್ಯಕ್ರಮದ ವಿವರವನ್ನು ನೀಡಿದರು ಹಾಗೂ ಸಂಸ್ಥೆಯ ಕ್ಲಬ್ ಪ್ರೊಜೆಕ್ಟ ಡೈರೆಕ್ಟರ್ ಇವರು ಒಂದು ವರ್ಷದ ತಮ್ಮ ಕಾರ್ಯಕ್ರಮದ ವಿವರವನ್ನು ನೀಡಿದರು. ಈ ವಾರದ ಕ್ವಿಜ್ ಅನ್ನು Rtn ರೇಖಾ ಉಪಾಧ್ಯಾಯ ಇವರು ನಡೆಸಿ ಕೊಟ್ಟಿರುತ್ತಾರೆ. Rtn ಹರಿಪ್ರಕಾಶ್ ಶೆಟ್ಟಿ ಮತ್ತು Rtn ವೃಂದ ಹರಿಪ್ರಕಾಶ್ ಶೆಟ್ಟಿ ವಾರದ ಉಪಹಾರದ ಪ್ರಾಯೋಜಕರಾಗಿರುತ್ತಾರೆ.

## ದಿನಾಂಕ 17–07–25 : 2ನೇ ವಾರದ ಸಭೆ

ರೋಟರಿ ಕ್ಲಬ್ ಕಾರ್ಕಳ ಇದರ 2ನೇ ವಾರದ ಸಭೆಯನ್ನು ದಿನಾಂಕ 17.07.2025 ಕಾರ್ಕಳ ರೋಟರಿ ಬಾಲಭವನದಲ್ಲಿ 6.30ಕ್ಕೆ ಸರಿಯಾಗಿ ನಡೆಸಲಾಯಿತು. ವೇದಿಕೆಯಲ್ಲಿ ಅಧ್ಯಕ್ಷರಾದ ರೋ. ನವೀನ್ಚಂದ್ರ ಶೆಟ್ಟಿ ಅವರು ಮುಖ್ಯ ಅತಿಥಿಯಾದ ರೋ. ಹೇಮಂತ್ ಯು. ಕಾಂತ್ ಹಾಗೂ ಕಾರ್ಯದರ್ಶಿ ರೋ. ಚೇತನ ನಾಯಕ್ ವೇದಿಕೆಯಲ್ಲಿದ್ದರು. ಮುಖ್ಯ ಅತಿಥಿ ಆಗಮಿಸಿದಂತಹ ರೋ. ಹೇಮಂತ್ ಯು. ಕಾಂತ್ ಇವರು ಮಾತನಾಡಿ ಹೊಸ ಸದಸ್ಯರಿಗೆ ಒಳ್ಳೆಯ ಮಾಹಿತಿಯನ್ನು ನಮಗೆ ನೀಡಿರುತ್ತಾರೆ ಮುಖ್ಯ ಅತಿಥಿಗಳ ಪರಿಚಯವನ್ನು ರೋ. ಬಾಲಕೃಷ್ಣ ಶೆಟ್ಟಿ ಇವರು ನೆರವೇರಿಸಿರುತ್ತಾರೆ ವಾರದ ಲಕ್ಕಿ ಸದಸ್ಯ ರೋ. ಬಾಲಕೃಷ್ಣ ದೇವಾಡಿಗ ಇವರು ಆಯ್ಕೆಯಾಗಿರುತ್ತಾರೆ. ಕಾರ್ಯದರ್ಶಿ ರೋ। ಚೇತನ ನಾಯಕ್ ವಂದನಾರ್ಪಣೆಯನ್ನು ನಡೆಸಿಕೊಟ್ಟರು




## ಸರಕಾರಿ ಪ್ರೌಢಶಾಲೆ ಕಾಬೆಟ್ಟು ಇಲ್ಲಿನ ನೂತನ ಇಂಟರ್ಯಾಕ್ಟ್ ಕ್ಲಬ್ಬಿನ ಪದಗ್ರಹಣ



ವಿದ್ಯಾರ್ಥಿಗಳು ಬಾಲ್ಯದಲ್ಲಿಯೇ ಸಮುದಾಯ ಸೇವೆಯನ್ನು ಮಾಡುವ ಅಭ್ಯಾಸವನ್ನು ಮೈಗೂಡಿಸಿಕೊಳ್ಳಬೇಕು. ಇಂಟರ್ಯಾಕ್ಟ್ ಕ್ಲಬ್ ಇದಕ್ಕೆ ಉತ್ತಮ ಅವಕಾಶ ನೀಡುತ್ತದೆ. ಎಂದು ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಹೇಳಿದರು. ಸರಕಾರಿ ಪ್ರೌಢಶಾಲೆ ಕಾಬೆಟ್ಟು ಇಲ್ಲಿನ ನೂತನ ಇಂಟರ್ಯಾಕ್ಟ್ ಕ್ಲಬ್ಬಿನ ಪದಗ್ರಹಣ ಸಮಾರಂಭದಲ್ಲಿ ಅಧ್ಯಕ್ಷೆ ಸಾಕ್ಷಿ ಕುಲಾಲ್ ಹಾಗೂ ಕಾರ್ಯದರ್ಶಿ ಶ್ರೇಷ್ಠ ಇವರಿಗೆ ಪದ ಪ್ರಧಾನ ಮಾಡಿ ಮಾತನಾಡುತ್ತಿದ್ದರು. ಕಾರ್ಕಳ ರೋಟರಿ ಕ್ಲಬ್ಬಿನ ಇಂಟರ್ಯಾಕ್ಟ್ ಕ್ಲಬ್ಬಿನ ಚೇರ್ಮನ್ ಬಾಲಕೃಷ್ಣ ದೇವಾಡಿಗ ಕ್ಲಬ್ಬಿನ ಬಗ್ಗೆ ಮಾಹಿತಿ ನೀಡಿದರು. ವಸಂತ್ ಎಂ ಹಾಗೂ ಇಕ್ಬಾಲ್ ಅಹ್ಮದ್ ಇಂಟರ್ಯಾಕ್ಟ್ ಕ್ಲಬ್ಬಿನ ವತಿಯಿಂದ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕು. ಸಾಕ್ಷಿ ಕುಲಾಲ್ ತನ್ನ ಈ ವರ್ಷದ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಕ್ಲಬ್ಬಿನ ಎಲ್ಲಾ ಸದಸ್ಯರ ಸಹಕಾರ ಕೋರಿದರು. ಶಾಲಾ ಎಸ್ ಡಿ ಎಂಸಿ ಅಧ್ಯಕ್ಷ ಪ್ರಧಾನ್ ಮಾಬೆನ್, ರೋಟರಿ ಕ್ಲಬ್ಬಿನ ಸದಸ್ಯರಾದ ಶೈಲೇಂದ್ರ ರಾವ್, ಸುರೇಶ್ ನಾಯಕ್, ಶೇಖರ್ ಎಚ್, ಇಲಿಯಾಸ್, ಮಮತಾ ಶೆಟ್ಟಿ, ಅರುಣ್ ಕುಮಾರ್ ಶೆಟ್ಟಿ, ಶಂಕರ್ ಕುಡ್ವ ಕಾರ್ಯಕ್ರಮದಲ್ಲಿ ಹಾಜರಿದ್ದು ಶುಭ ಹಾರೈಸಿದರು. ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಮುಖ್ಯ ಶಿಕ್ಷಕಿ ಇಂದಿರಾ ಸ್ವಾಗತಿಸಿದರು. .

## ಎಸ್.ವಿ.ಟಿ.ಪದವಿಪೂರ್ವ ಕಾಲೇಜು ಕಾರ್ಕಳ ಇಲ್ಲಿನ ನೂತನ ಇಂಟರ್ಯಾಕ್ಟ್ ಕ್ಲಬ್ಬಿನ ಪದಗ್ರಹಣ

ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಳ್ಳುವುದರ ಜೊತೆಗೆ ದೇಶದ ಉತ್ತಮ ಪ್ರಜೆಗಳಾಗಿ ಎಂದು ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಹೇಳಿದರು. ಅವರು ಎಸ್.ವಿ.ಟಿ.ಪದವಿಪೂರ್ವ ಕಾಲೇಜು ಕಾರ್ಕಳ ಇಲ್ಲಿನ ನೂತನ ಇಂಟರ್ಯಾಕ್ಟ್ ಕ್ಲಬ್ಬಿನ ಪದಗ್ರಹಣ ಸಮಾರಂಭದಲ್ಲಿ ಅಧ್ಯಕ್ಷೆ ವೀಶ್ವರಿ ಇವರಿಗೆ ಪದ ಪ್ರಧಾನ ಮಾಡಿ ಮಾತನಾಡುತ್ತಿದ್ದರು. ಕಾರ್ಕಳ ರೋಟರಿ ಕ್ಲಬ್ಬಿನ ಇಂಟರ್ಯಾಕ್ಟ್ ಕ್ಲಬ್ಬಿನ ಚೇರ್ಮನ್ ಬಾಲಕೃಷ್ಣ ದೇವಾಡಿಗ ಕ್ಲಬ್ಬಿನ ಬಗ್ಗೆ ಮಾಹಿತಿ ನೀಡಿದರು. ಪ್ರಾಂಶುಪಾಲ ನೇಮಿರಾಜ್ ಶೆಟ್ಟಿ ಹಾಗೂ ಮುಖ್ಯ ಶಿಕ್ಷಕ ಯೋಗೀಂದ್ರ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕು. ವೀಶ್ವರಿ ತನ್ನ ತಂಡವನ್ನು ಪರಿಚಯಿಸಿದರು. ಈ ವರ್ಷದ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಕ್ಲಬ್ಬಿನ ಎಲ್ಲಾ ಸದಸ್ಯರ ಸಹಕಾರ ಕೋರಿದರು. ಪೂರ್ವಾಧ್ಯಕ್ಷೆ ಅನ್ವಿತಾ ಹಿಂದಿನ ವರ್ಷದ ವರದಿ ಮಂಡಿಸಿದರು. ಕಾರ್ಯದರ್ಶಿ ಚೇತನ್ ನಾಯಕ್, ರೋಟರಿ ಕ್ಲಬ್ಬಿನ ಸದಸ್ಯರಾದ ವಸಂತ್ ಎಂ, ಇಕ್ಬಾಲ್ ಅಹ್ಮದ್, ಶೇಖರ್ ಎಚ್, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಮಾರ್ಗದರ್ಶಕ ಶಿಕ್ಷಕ ದೇವದಾಸ್ ಕೆರೆಮನೆ ಸ್ವಾಗತಿಸಿದರು. ಕು.ಸುಶ್ಮಿತಾ ನಿರೂಪಿಸಿದರು. ಕಾರ್ಯದರ್ಶಿ ಅರ್ಪಿತಾ ವಂದಿಸಿದರು.



## ಕ್ರೈಸ್ಟ್‌ಕಿಂಗ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ ನೂತನ ಇಂಟರ್ಯಾಕ್ಟ್ ಕ್ಲಬ್ಬಿನ ಪದಗ್ರಹಣ




ವಿದ್ಯಾರ್ಥಿ ದೆಸೆಯಲ್ಲಿ ಸಮಾಜ ಸೇವೆಯನ್ನು ರೂಢಿಸಿಕೊಂಡು ನಾಯಕತ್ವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಕಾರ್ಕಳ ರೋಟರಿ ಕ್ಲಬ್ಬಿನ ಅಧ್ಯಕ್ಷ ನವೀನ್‌ಚಂದ್ರ ಶೆಟ್ಟಿ ಹೇಳಿದರು. ಅವರು ಕ್ರೈಸ್ಟ್ ಕಿಂಗ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ ಇಂಟರ್ಯಾಕ್ಟ್ ಕ್ಲಬ್ಬಿನ ನೂತನ ಅಧ್ಯಕ್ಷ ಕಾರ್ಯದರ್ಶಿಯವರ ಪದ ಪ್ರಧಾನ ಮಾಡಿ ಮಾತನಾಡುತ್ತಿದ್ದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನೂತನ ಅಧ್ಯಕ್ಷೆ ಕು. ಸುಬೇದ ತನ್ನ ತಂಡವನ್ನು ಸಭೆಗೆ ಪರಿಚಯಿಸಿ ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ನಿರ್ಗಮನ ಅಧ್ಯಕ್ಷೆ ಕು. ಸಾನ್ವಿ ಮಾರ್ಟಿಸ್ ಹಿಂದಿನ ವರ್ಷದ ವರದಿ ಮಂಡಿಸಿದರು. ಇಂಟರ್ಯಾಕ್ಟ್ ಚೇರ್‌ಮೇನ್ ಬಾಲಕೃಷ್ಣ ದೇವಾಡಿಗ ಇಂಟರ್ಯಾಕ್ಟ್ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ರೋಟರಿ ಕ್ಲಬ್ಬಿನ ಪೂರ್ವ ಅಧ್ಯಕ್ಷ ಇಕ್ಬಾಲ್ ಅಹಮದ್, ಕಾರ್ಯದರ್ಶಿ ಚೇತನ್ ನಾಯಕ್, ಮುಖ್ಯೋಪಾಧ್ಯಾಯನಿ ಜೋಸ್ನ, ಸ್ನೇಹಲತಾ ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು. ಇಂಟರ್ಯಾಕ್ಟ್ ಕ್ಲಬ್ಬಿನ ಸಂಯೋಜಕ ಶಿಕ್ಷಕಿ ಶೈಲಿ ಹೆಗ್ಡೆ ಅತಿಥಿಗಳನ್ನು ಪರಿಚಯಿಸಿದರು. ಶಿಕ್ಷಕಿ ಸುಶ್ಮಿತಾ ಕಾರ್ಯಕ್ರಮ ನಿರೂಪಿಸಿದರು. ವಿಶಾನ್ ಸಲ್ಡಾನ ವಂದಿಸಿದರು.




Rtn. Francesco Arezzo
R.I. President



Rtn. Palaksha K.
Dist. Governor

SERVICE ABOVE SELF

# SERVICE

THE OFFICIAL HOUSE BULLETIN OF

Rotary

# ROTARY CLUB KARKALA

UNITE FOR GOOD



Rtn. Naveenchandra Shetty
President



Rtn. Chethan Nayak
Secretary

ZONE- 5, R.I. DIST.3182 Club No. 15726 Charter Date : 09-03-1964.

Monthly EDITION JULY 23, 2025 ISSUE - 2


## ರೋಟರಿ ಕ್ಲಬ್ ಕಾರ್ಕಳ ಇದರ 2025–26 ನೇ ಸಾಲಿನ ಪದಗ್ರಹಣ ಕಾರ್ಯಕ್ರಮ

ರೋಟರಿ ಕ್ಲಬ್ ಕಾರ್ಕಳ ಇದರ ಪದಗ್ರಹಣ ಕಾರ್ಯಕ್ರಮ ಪ್ರಕಾಶ್ ಹೋಟೆಲಿನ ಉತ್ಸವ ಸಭಾಂಗಣದಲ್ಲಿ ನಡೆಯಿತು ನೂತನ ಅಧ್ಯಕ್ಷರಾಗಿ ರೋಟೆರಿಯನ್ ಪಿ ಎಚ್ ಎಫ್ ನವೀನ್‌ಚಂದ್ರ ಶೆಟ್ಟಿ ಹಾಗೂ ನೂತನ ಕಾರ್ಯದರ್ಶಿಯಾಗಿ ರೊಟೇರಿಯನ್ ಚೇತನ್ ನಾಯಕ್ ಅಧಿಕಾರವನ್ನು ಸ್ವೀಕರಿಸಿದರು ಪದ–ಪ್ರಧಾನ ಅಧಿಕಾರಿಯಾಗಿ ರೋಟರಿ ಜಿಲ್ಲೆ 3182 ರ ಮಾಜಿ ಗವರ್ನರ್ ರೊಟೇರಿಯನ್ ಅಭಿನಂದನ್ ಶೆಟ್ಟಿ ಪದಪ್ರಧಾನ ನೆರವೇರಿಸಿದರು.




ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಕಾರ್ಕಳ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ ಸ್ವಸ್ತಿ ಕಾಮತ್, ಕಾರ್ತಿಕ್, ಸಿದ್ದರಾಜ್ ಡಿ ಶೆಟ್ಟಿ ಅವರಿಗೆ ನಗದು ಪುರಸ್ಕಾರದೊಂದಿಗೆ ಸನ್ಮಾನಿಸಲಾಯಿತು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶಾಲಾ ಪರಿಕರಗಳನ್ನು ನೀಡಲಾಯಿತು. ಕಾಬೆಟ್ಟು ಸರಕಾರಿ ಪ್ರೌಢಶಾಲೆಗೆ ಇನ್ಸಿರೇಟರ್ ಹಾಗೂ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಹೊಲಿಗೆ ಯಂತ್ರಗಳನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ನಿರ್ಗಮನ ಅಧ್ಯಕ್ಷ ರೋ. ಇಕ್ಬಾಲ್ ಅಹಮದ್ ನಿರ್ಗಮನ ಕಾರ್ಯದರ್ಶಿ, ರೋ. ಗಣೇಶ್ ಸಾಲಿಯಾನ್ ಹಾಗೂ ನಿಕಟ ಪೂರ್ವ ಸಹಾಯಕ ಗವರ್ನರ್ ರೋ. ಅನಿಲ್ ಡೇಸಾ, ವಲಯ ಸೇನಾನಿ ರೋ. ಸುರೇಶ್ ನಾಯಕ್ ಇವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಪತ್ರಿಕೆ ಸರ್ವಿಸ್ ಅನ್ನು ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ 2025–26 ನೇ ಸಾಲಿನ ಸಹಾಯಕ ಗವರ್ನರ್ ವಿಘ್ನೇಶ್ ಶೆಣೈ, ವಲಯ ಸೇನಾನಿ ಜಾನ್ ಆರ್ ಡಿ ಸಿಲ್ವಾ ಮುಂತಾದವರು ಉಪಸ್ಥಿತರಿದ್ದರು . ನಿಕಟಪೂರ್ವ ಅಧ್ಯಕ್ಷರಾದ ರೋ. ಇಕ್ಬಾಲ್ ಅಹಮದ್ ಸ್ವಾಗತಿಸಿದರು ನಿಕಟ ಪೂರ್ವ ಕಾರ್ಯದರ್ಶಿ, ರೋ. ಗಣೇಶ ಸಾಲಿಯಾನ್ ವರದಿ ಮಂಡಿಸಿದರು ರೋ. ಹರ್ಷಿಣಿ ವಿಜಯರಾಜ್ ಶೆಟ್ಟಿ ಮತ್ತು ರೋ. ಸುಬ್ರಮಣ್ಯ ದೇವಾಡಿಗ ಕಾರ್ಯಕ್ರಮವನ್ನು ನಿರೂಪಿಸಿದರು. ರೋ. ಶಿವಕುಮಾರ್ ಪ್ರಾರ್ಥನೆಯನ್ನು ನೇರವೇರಿಸಿದರು ಕಾರ್ಯದರ್ಶಿ ಧನ್ಯವಾದವನ್ನಿತ್ತರು.

## ಅಂತರಾಷ್ಟ್ರೀಯ ವೈದ್ಯರ ಮತ್ತು ಲೆಕ್ಕಪರಿಶೋಧಕರ ದಿನಾಚರಣೆ

ಅಂತರ್ರಾಷ್ಟ್ರೀಯ ವೈದ್ಯರ ದಿನಾಚರಣೆ ರೋಟರಿ ಕ್ಲಬ್ ಕಾರ್ಕಳ ಇದರ ವತಿಯಿಂದ ದಿನಾಂಕ 1.7.2025 ರಂದು ಕಾರ್ಕಳ ಟಿ. ಎಮ್. ಎ. ಪೈ. ರೋಟರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಸಂಜಯ್ ಅವರನ್ನು ಸನ್ಮಾನಿಸುವ ಮುಖಾಂತರ ಹಾಗೂ ಇತರ ವೈದ್ಯರಿಗೆ ಹೂ ನೀಡಿ ಸಿಹಿ ಹಂಚಿ ಶುಭಾಶಯಗಳನ್ನು ಕೋರಲಾಯಿತು. ಲೆಕ್ಕಪರಿಶೋಧಕರ ದಿನಾಚರಣೆಯ ಪ್ರಯುಕ್ತ ನಮ್ಮ ಸದಸ್ಯರಾದ ಸಿ.ಎ. ಪ್ರಭಾತ ಕುಮಾರ ಹಾಗೂ ನಿವೃತ್ತ ಲೆಕ್ಕಪರಿಶೋಧಕರಾದ ಕಮಲಾಕ್ಷ ಕಾಮತ್ ಇವರನ್ನು ಸನ್ಮಾನಿಸಲಾಯಿತು.



### OFFICE BEARERS 2025-26

President :
**Rtn. Naveenchandra Shetty**
Mob : 9448254344

Vice President :
**Rtn. Arun Kumar Shetty**
Mob : 9845207678

Immediate Past President :
**Rtn. Iqbal Ahmed**
Mob : 9880313852

Secretary :
**Rtn. Chethan Nayak**
Mob : 9880726811

Joint Secretary :
**Rtn. Shreesha Bhat**
Mob : 9986795950

Treasurer :
**Rtn. Harshini Vijayaraj**
Mob : 9880644905

Sargeant at arms :
**Rtn. Chethan Kumar**
Mob : 7349718605

### DIRECTORS

President Elect :
**Rtn. K. Vijendra Kumar**
Mob : 9845232490/9611682681

Club Learning Facilitator :
**Rtn. Soujanya Upadhyaya**
Mob : 9845356244

Vocational Service :
**Rtn. Shailendra Rao**
Mob : 9845353475

Community Service :
**Rtn. Vasanth M.**
Mob : 9449166492

International Service :
**Rtn. Suresh Nayak K.S.**
Mob : 9980898080

New Generation & Youth Service :
**Rtn. Niranjan Jain**
Mob : 9972210070

Chairman Club Membership
**Rtn. CA Prabhatha Kumara**
Mob : 9845080970

Chairman T.R.F.
**Rtn. Suvarna Nayak R.**
Mob : 9845205256

Chairman Public Image
**Rtn. Jyothi Padmanabh**
Mob : 9019736528

Chairman Pulse Polio :
**Rtn. Dr. Kirthinath Ballal**
Mob : 9844270050

I.T. Website :
**Rtn. Rekha Upadhyaya**
Mob : 9900213535

District Project :
**Rtn. Dr. Asha P. Hegde**
Mob : 9448824967

Bulletin Editor :
**Rtn. Ganesh Salian**
Mob : 9844332536

## *Editorial .....*

*Dear fellow Rotarians,*

"Strength comes from Struggle. When you learn to see your Struggles as Opportunities to become Stronger, better Wiser, then your thinking shifts from " I CAN'T DO THIS" to " I MUST DO THIS."

This is how we must take up Rotary activities and plan it according to the need of the hour. The collective effort of all the members will help to organise all the programmes/ projects in a successful and purposeful manner. What we have achieved during last year should not remain as memories, but we must try to continue them this year too. Being the senoir club of this zone everybody are watching our way of working. . Let us also involve all the new members in the activities and make them feel about the Rotary movement.

"Wish you all a successful Rotary year"

*Your's in Rotary*
**Rtn. Ganesh Salian**

## *President's Privilege.....*

*Dear Rotary family members,*

In everyday Struggle maintain your cool and emotions This will help to lead a peaceful future ".

I am trying my best with all the cooperation of our team by organising various programmes. Each and every programme gives us new experience and challenges. Ultimately it is service to the humanity is Rotary's main motive. We are getting tremendous response in every health/ blood/eye camps. This will motivate us to conduct more such programmes. At the initial stage there may be some lapses. But they will be solved during the new projects.

To organise all the programmes /projects we need financial support. This is possible only if you all pay your annual membership subscription on time. So my appeal to all to make it at the earliest and support us. Let us prove ourselves that we are active Rotarians of RC Karkala.

*Your's in Rotary*
**Rtn.PHF Naveenchandra Shetty**

ROTARY INFORMATION

## Maternal and Child Health Month




Rotary International prioritizes maternal and child health as one of its six Areas of Focus, working to improve access to quality healthcare and reduce mortality rates for mothers and children. Rotary clubs and districts around the world implement various projects, such as providing immunizations, family planning, and training healthcare providers, to achieve these goals. Reducing Mortality Rates:

Rotary aims to reduce the mortality rate for children under five and the maternal mortality rate by improving access to essential medical services and trained healthcare providers.

This includes providing support for mobile health clinics, family planning services, and promoting public nutrition training.

Strengthening Healthcare Systems:

Rotary supports projects that strengthen the healthcare system by providing medical equipment, training healthcare personnel, and improving access to medical services.

Specific Initiatives:

Rotary clubs and districts engage in a wide range of projects, such as funding mobile cancer screening units, repairing obstetric fistulas, and establishing sustainable HIV response programs.

Rotary's focus on maternal and child health also includes addressing issues like malnutrition and promoting breastfeeding education.




## ವನಮಹೋತ್ಸವ ಕಾರ್ಯಕ್ರಮ

ರೋಟರಿ ಕ್ಲಬ್ ಕಾರ್ಕಳ ಇದರ ವತಿಯಿಂದ ವನಮಹೋತ್ಸವ ಕಾರ್ಯಕ್ರಮ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಬೆಟ್ಟು ಇಲ್ಲಿ ನಡೆಯಿತು ಸಭೆಯ ಅಧ್ಯಕ್ಷತೆಯನ್ನು ಶಾಲಾ ಎಸ್‌ಡಿಎಂಸಿ ಅಧ್ಯಕ್ಷರಾದ ಆರಿಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್‌ಚಂದ್ರ ಶೆಟ್ಟಿ ಗಿಡಗಳನ್ನು ಬೆಳೆಸುವುದರಿಂದ ಪರಿಸರಕ್ಕೆ ಹಾಗೂ ಮಾನವನಿಗೆ ಆಗುವ ಪ್ರಯೋಜನಗಳ ಬಗ್ಗೆ ಪ್ರಸ್ತಾಪಿಸಿ ಪರಿಸರವನ್ನು ಉಳಿಸಿ ಪ್ಲಾಸ್ಟಿಕ್ ತ್ಯಜಿಸಿ ಎಂದರು. ಮೇಜರ್ ಡೋನರ್ ಲೆವೆಲ್ 2 ರೋಟೇರಿಯನ್ ಮೋಹನ್ ಶೆಣೈ ಕಾರ್ಯದರ್ಶಿ ಚೇತನ್ ನಾಯಕ್ ಕಮ್ಯುನಿಟಿ ಸರ್ವಿಸ್ ಚೇರ್ಮನ್ ವಸಂತ್ ಎಂ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಇಂದಿರಾ ಶಾಲಾ ಹಿತೈಷಿ ವೈಕುಂಠ ಶೆಣೈ ವೇದಿಕೆಯಲ್ಲಿ ಉಪಸ್ಥಿತರಿದ್ದರು ಮಾಜಿ ಸಹಾಯಕ ಗವರ್ನರ್ ಶೈಲೇಂದ್ರ ರಾವ್ ಮಾಜಿ ವಲಯ ಸೇನಾನಿ ಸುರೇಶ್ ನಾಯಕ್ ದಂಪತಿ, ಉಪಾಧ್ಯಕ್ಷ ಅರುಣ್ ಶೆಟ್ಟಿ, ಶೇಖರ್ ಹೆಚ್, ಬಾಲಕೃಷ್ಣ ದೇವಾಡಿಗ, ಸುಧಾಕರ ಪೂಜಾರಿ ಉಪಸ್ಥಿತರಿದ್ದು ಸಹಕರಿಸಿದರು ಮುಖ್ಯ ಶಿಕ್ಷಕ ಸುಧಾಕರ್ ಪೂಜಾರಿ ಸ್ವಾಗತಿಸಿದರು ದೈಹಿಕ ಶಿಕ್ಷಕ ನರೇಂದ್ರ ಕಾಮತ್ ನಿರೂಪಿಸಿ ವಂದಿಸಿದರು

## ವನಮಹೋತ್ಸವ ಕಾರ್ಯಕ್ರಮ ಮತ್ತು ವಿಜೇತ ವಿಶೇಷ ಶಾಲೆಗೆ ಅವಶ್ಯವಿರುವ ಅಡುಗೆ ಪಾತ್ರೆಗಳ ಹಸ್ತಾಂತರ




ವಿಜೇತ ವಿಶೇಷ ಶಾಲೆಗೆ ಅವಶ್ಯವಿರುವ ಅಡುಗೆ ಪಾತ್ರೆಗಳ ಹಸ್ತಾಂತರ ಹಾಗೂ ವನಮಹೋತ್ಸವ ಕಾರ್ಯಕ್ರಮ ನಡೆಯಿತು ರೊಟೇರಿಯನ್ ಪಿ.ಎಚ್.ಎಫ್. ಸುರೇಶ್ ನಾಯಕ್ ದಂಪತಿಗಳ ಮಗ ಸುಹಾಸ್ ಸೊಸೆ ಅಂಜಲಿ ಇವರ ಪ್ರಯುಕ್ತ ನಮ್ಮ ಸಂಸ್ಥೆಯ ಮೂಲಕ ವಿಜೇತ ವಿಶೇಷ ಶಾಲೆಗೆ ಅವಶ್ಯಕವಿರುವ ಅಡುಗೆ ಪಾತ್ರೆಗಳನ್ನು ಹಸ್ತಾಂತರಿಸಿದರು ಹಾಗೂ ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರೊಟೇರಿಯನ್ ನವೀನ್ ಚಂದ್ರ ಶೆಟ್ಟಿ , ಮೇಜರ್ ಡೋನರ್ ಲೆವೆಲ್ 2 ರೋ ಮೋಹನ್ ಶೆಣೈ, ರೋ ಶೇಖರ್ ಹೆಚ್, ವಸಂತ ಎಂ. ಅರುಣ್ ಶೆಟ್ಟಿ, ಶ್ರೀಶ ಭಟ್, ಚೇತನ್ ನಾಯಕ್, ಡಾ.ಕಾಂತಿ ಹರೀಶ್ ಉಪಸ್ಥಿತರಿದ್ದರು.




## ರಕ್ತದಾನ ಮಾಡೋದು ಪ್ರತಿಯೊಬ್ಬನ ಜವಾಬ್ದಾರಿಯಾಗಬೇಕು

ರೋಟರಿ ಕ್ಲಬ್ ಕಾರ್ಕಳ, ಜನನಿ ಮಿತ್ರ ಮಂಡಳಿ (ರಿ) ವಾಂಟ್ರಾಯಿಪದವು, ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಡೆದ ಬೃಹತ್ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಮೇಜರ್ ಡೋನರ್ ರೋ. ಮೋಹನ್ ಶೆಣೈಯವರು "ರಕ್ತದಾನ ಮಾಡುವುದು ಪ್ರತಿಯೊಬ್ಬನ ಜವಾಬ್ದಾರಿ. ರಕ್ತದಾನ ಮಹಾದಾನ ರಕ್ತದಾನ ಮಾಡುವುದರ ಮೂಲಕ ಸಂಕಷ್ಟದಲ್ಲಿರುವವರಿಗೆ ಜೀವದಾನ ಮಾಡಬಹುದು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜನನಿ ಮಿತ್ರ ಮಂಡಳಿಯ ಅಧ್ಯಕ್ಷ ದಿವಾಕರ್ ಎಂ ಬಂಗೇರ ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಮಾತನಾಡುತ್ತಾ ಇಂಥ ಉತ್ತಮ ಕಾರ್ಯಕ್ರಮಗಳಲ್ಲಿ ಸ್ಥಳೀಯ ಸಂಘಟನೆಗಳು ಸಹಕರಿಸುತ್ತಿರುವುದು ಎಲ್ಲರಿಗೂ ಮಾದರಿಯಾಗಲಿ ಎಂದರು. ಜಿಲ್ಲಾ ಆಸ್ಪತ್ರೆ ರಕ್ತ ನಿಧಿ ವಿಭಾಗ ಅಜ್ಜರಕಾಡು ಉಡುಪಿ ಇಲ್ಲಿನ ವೈದ್ಯಾಧಿಕಾರಿ ಡಾ.ದಿವ್ಯಾ ರವರು ರಕ್ತದಾನದ ಬಗ್ಗೆ ಮಾಹಿತಿ ನೀಡುತ್ತಾ ಇತ್ತೀಚಿನ ದಿನಗಳಲ್ಲಿ ರಕ್ತದಾನದ ಮಹತ್ವ ಅರಿತು ಎಲ್ಲರೂ ರಕ್ತದಾನ ಮಾಡಲು ಮುಂದೆ ಬರುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ರೋಟರಿ ಸಮುದಾಯದಳ ಇದರ ಅಧ್ಯಕ್ಷ ಸುರೇಶ್ ಆಚಾರ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಜೇಶ್ ಕುಲಾಲ್, ರೋಟರ್ಯಾಕ್ಟ್ ಕ್ಲಬ್ಬಿನ ಅಧ್ಯಕ್ಷ ಸಂದೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಬಿರದಲ್ಲಿ 31 ಯೂನಿಟ್ ರಕ್ತ ಸಂಗ್ರಹಿಸಲಾಯಿತು. ಮನಸ್ವಿ ಕುಲಾಲ್ ಮತ್ತು ತಂಡದವರು ಪ್ರಾರ್ಥಿಸಿದರು. ಸದಾಶಿವ ನಿರೂಪಿಸಿದರು. ಶಿವಾನಂದ ವಂದಿಸಿದರು

## ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠ ತಪಾಸಣಾ ಶಿಬಿರ



ಜನನಿ ಮಿತ್ರ ಮಂಡಳಿ (ರಿ) ವಾಂಟ್ರಾಯಿ ಪದವು ರೋಟರಿ ಕ್ಲಬ್ ಕಾರ್ಕಳ, ಜೆಸಿಐ ಕಾರ್ಕಳ, ಹಳೆ ವಿದ್ಯಾರ್ಥಿ ಸಂಘ ಕಲಂಬಾಡಿ ಪದವು ರೊಟಾರ್ಯಾಕ್ಟ್ ಕ್ಲಬ್ ಕಾರ್ಕಳ ಇನ್ನು ಹಲವು ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮಣಿಪಾಲ ಇವರ ನೇತೃತ್ವದಲ್ಲಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠ ತಪಾಸಣಾ ಶಿಬಿರವನ್ನು ಡಾ. ಜೆಲಿಟ ಇವರು ದೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಈ ಸಂದರ್ಭದಲ್ಲಿ ರೋಟರಿ ಕ್ಲಬ್ ನ ಅಧ್ಯಕ್ಷರಾದ ನವೀನ್ ಚಂದ್ರ ಶೆಟ್ಟಿ ಕಾರ್ಯದರ್ಶಿ ಚೇತನ್ ನಾಯಕ್ ರೊಟ್ರಾಕ್ಟ್ ಕ್ಲಬ್‌ನ ಅಧ್ಯಕ್ಷ ಸಂದೇಶ್ ರೋ. ಇಕ್ಬಾಲ್ ಅಹಮದ್ ಜನನಿ ಮಿತ್ರ ಮಂಡಳಿಯ ಕಾರ್ಯದರ್ಶಿ ಪ್ರವೀಣ್ ಉಪಸ್ಥಿತರಿದ್ದರು ಈ ಸಂದರ್ಭದಲ್ಲಿ ಜನನಿ ಮಿತ್ರ ಮಂಡಳಿಯ ಅಧ್ಯಕ್ಷರಾದ ದಿವಾಕರ್ ಎಂ. ಬಂಗೇರ ಇವರು ಅತಿಥಿ ಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿದರು. ಕೆ.ಎಂ.ಸಿ. ಮಣಿಪಾಲ ಇದರ ಕೌನ್ಸಿಲರ್ ಪುಷ್ಪಲತಾ ಇವರು ತಪಾಸಣಾ ಶಿಬಿರದ ಬಗ್ಗೆ ಮಾಹಿತಿಯನ್ನು ನೀಡಿದರು ಈ ಶಿಬಿರದಲ್ಲಿ ಸುಮಾರು 60 ಮಂದಿ ತಪಾಸಣಾ ಶಿಬಿರದಲ್ಲಿ ಭಾಗವಹಿಸಿದರು.